## ದುಃಖದಾಯಕ!

‘ನಿವೃತ್ತಿಯ ಡಬಲ್ ಪೆಟ್ಟು’ (ಮೇ 29, ವಿಶಾಖ ಎನ್.) ಲೇಖನ ಕ್ರಿಕೆಟ್ ಪ್ರಿಯಳಾದ ನನ್ನ ಕಣ್ಣಂಚಿನಲ್ಲಿ ನೀರು ತರಿಸಿತು. ಜೊತೆಗೆ ಮುಂದೆ ಏನು, ಹೇಗೆ ಎಂಬ ಆತಂಕವೂ ತುಂಬಿತು. ಹಿಟ್‌ಮ್ಯಾನ್ ರೋಹಿತ್‌ರವರ ಸಿಕ್ಸರ್‌ಗಳು, ಸ್ಟಂಪ್ ಮೈಕಿನಲ್ಲಿ ಕೇಳಿಸುತ್ತಿದ್ದ ಅವರ ‘ಸುಭಾಷಿತ’ಗಳು (!), ಕಿಂಗ್ ಕೊಹ್ಲಿ ಅವರ ಮನಮೋಹಕ ಹೊಡೆತಗಳು, ದಣಿವರಿಯದ ಅವರ ಉತ್ಸಾಹ, ಇನ್ನುಮುಂದೆ ಟೆಸ್ಟ್ ಪಂದ್ಯಗಳಲ್ಲಿ ನೋಡಲು ಸಿಗುವುದಿಲ್ಲ ಎಂಬುದು ದುಃಖದಾಯಕ! ಎಂದೆಂದಿಗೂ ನಿಮ್ಮೊಂದಿಗೆ ನಾವು ‘ರೋಕೋ’!

—ಕೆ.ಆರ್. ಶಕುಂತಲಮ್ಮ

**ಉಸಿರು**

‘... ಕೆಂಪುದೀಪದ ಬೀದಿಯಲ್ಲಿ’ ಎಲ್ಲಿ ತಾನೆ ಇಲ್ಲ ‘ಕೆಂಪು’ ದೀಪದ ಬೀದಿಗಳು? ಲಾಗಾಯ್ತಿನಿಂದಲೂ ಇವೆ! ಈಗ ಬೇಕಾದದ್ದು ‘ಹಸಿರು’ ದೀಪಗಳ ಕಂಪು–ಉಸಿರು!

—ಸಿಪಿಕೆ, ಮೈಸೂರು

## ಸುಂದರ ಪರಿಕಲ್ಪನೆ

‘ಜೋಂಬಿ ಜಗತ್ತು’ (ಮೇ 29, ಚಂಪಕಮಾಲಾ) ‘ವಿಚಾರ ಲಹರಿ’ ಜೋಂಬಿ ಜಗತ್ತಿನ ಪರಿಕಲ್ಪನೆಯನ್ನು ತುಂಬಾ ಚೆನ್ನಾಗಿ ಪ್ರಸ್ತುತಪಡಿಸಿದೆ. ಸಾಹಿತ್ಯ ಅಧ್ಯಯನ, ಸಾಹಿತ್ಯದ ಸಂಪರ್ಕದಿಂದಾಗಿ ಪ್ರಸ್ತುತ ಮನುಷ್ಯ ಜಗತ್ತನ್ನು ಹೃದಯಶೀಲರನ್ನಾಗಿ ಮಾಡಲು ಸಾಧ್ಯವಿದೆ, ಆ ದಿಸೆಯತ್ತ ನಾವೆಲ್ಲಾ ಯೋಚಿಸಿ, ಯೋಜಿಸಬೇಕಾದ ಅನಿವಾರ್ಯತೆ ಇದೆ.

—ಎಂ.ಜಿ. ರಾಮಚಂದ್ರ, ಶಿವಮೊಗ್ಗ

## ಚಿಂತನಶೀಲ ಬರಹ

‘ಸುಳ್ಳುಗಳ ಸಂತೆಯಲೊಂದು ಮನೆ ಮಾಡಿ’ (ಮೇ 29, ರಘುನಾಥ ಚ.ಹ.) ‘ನಿಮ್ಮೊಡನೆ’ ಬರಹ ಚಿಂತನಶೀಲವಾಗಿದೆ. ಸಮಾಜದ ಆರೋಗ್ಯ ದೃಷ್ಟಿಯಿಂದ ಸುಳ್ಳು ಸುದ್ದಿಗಳಿಗೆ ಅವಕಾಶ ನೀಡದಂತೆ ನಿಗಾ ವಹಿಸುವುದು ಅವಶ್ಯಕ. ಸುಳ್ಳು ಸುದ್ದಿಗಳ ನಿಯಂತ್ರಣದಲ್ಲಿ ಕಾನೂನಿನ ಮತ್ತು ಸರ್ಕಾರದ ಹೊಣೆಗಾರಿಕೆ ಕುರಿತು ನೀಡಿದ ವಿವರವಾದ ವಿಶ್ಲೇಷಣೆ ಆಪ್ತವೆನಿಸಿತು.

—ಕೆ.ಪಿ. ರಾಮುಗುಂಡಿ, ಬೈಲಹೊಂಗಲ




## ಮದುವೆಯ ಹೊಸ ಪರಿಕಲ್ಪನೆ

‘ವಿಹಾರ–ವಿವಾಹ’ (ಮೇ 29, ಉಮಾ ಅನಂತ್) ಮುಖಪುಟ ಲೇಖನ ಮದುವೆಯ ಹೊಸ ಪರಿಕಲ್ಪನೆಯನ್ನು ತಿಳಿಸಿಕೊಟ್ಟಿತು. ನಾಗರಿಕತೆ ಬದಲಾದಂತೆ ವಿವಾಹ ಶೈಲಿಯೂ ಬದಲಾಗುತ್ತಾ ಹೋಗುತ್ತದೆ ಎಂಬುದನ್ನು ತಿಳಿಸಿತು. ಪ್ರತಿ ಕಾಲಘಟ್ಟದಲ್ಲಿಯೂ ಬದಲಾವಣೆಗಳು ರಾರಾಜಿಸುತ್ತವೆ. ಪೂರಕವಾಗಿ ವಿವಾಹ ಶೈಲಿಗಳೂ ಬದಲಾಗುತ್ತವೆ. ಹಾಗೇ ಈ ‘ಡೆಸ್ಟಿನೇಷನ್ ವೆಡ್ಡಿಂಗ್’.

ಇದೇ ಪರಿಕಲ್ಪನೆಯಲ್ಲಿ ನನ್ನ ಸ್ನೇಹಿತನ ಮಗನ ಮದುವೆ ನಡೆಯಿತು, ಆದರೆ ಸರಳವಾಗಿ. ನಮ್ಮೂರಿನ ಪಕ್ಕದ ಚಿಲುಕವಾಡಿ ಬೆಟ್ಟದ ಶಂಭುಲಿಂಗೇಶ್ವರನ ಸನ್ನಿಧಾನದಲ್ಲಿ ಮದುವೆ ನಡೆಯಿತು. ಛತ್ರದ ಬಾಡಿಗೆ ಹಣದಲ್ಲಿ ಭರ್ಜರಿ ಅನ್ನ ಸಾರು, ಪಾಯಸ, ಕಡಲೆಹುಳಿ, ಹಪ್ಪಳದ ಊಟ, ನೆಲದ ಮೇಲೇ ಪಂಕ್ತಿಯಲ್ಲಿ ಕುಳಿತು ಊಟ ಮಾಡಿ ವಧು ವರರಿಗೆ ಹರಸಿ ಬೆಟ್ಟದಲ್ಲಿದ್ದ ದೇವಾನುದೇವತೆಗಳಿಗೆಲ್ಲ ಕೈ ಮುಗಿದು ಮನೆಗಳಿಗೆ ಹೋದರು. ವಿಹಾರ ವಿವಾಹ ವೈಭವದ್ದಾದರೆ, ನನ್ನ ಗೆಳೆಯನ ಮಗನ ಮದುವೆ ಸರಳ, ಸುಂದರವಾಗಿತ್ತು. ಬೆಟ್ಟದ ತಂಗಾಳಿಗೆ ಮೈಯೊಡ್ಡಿ ಸಂಜೆ ಊರಿಗೆ ಹೋದೆವು.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

## ಸಂಡೂರಿನಲ್ಲಿ ಮದುವೆ

ಲೇಖನ ಓದುತ್ತಿದ್ದಂತೆ ಬಳ್ಳಾರಿಯ ನನ್ನ ತಮ್ಮನ ವಿವಾಹವನ್ನು ಗಾಂಧೀಜಿ ಅವರು ವರ್ಣಿಸಿದ ಸ್ಥಳ ‘SEE SANDUR IN SEPTEMBER’ ಎಂದು ಖ್ಯಾತಿ ಪಡೆದ ಸಂಡೂರಿನಲ್ಲಿ ‘ಡೆಸ್ಟಿನೇಷನ್ ವೆಡ್ಡಿಂಗ್’ ಮಾಡಿದ್ದು ನೆನಪಾಯಿತು.

—ಅನುರಾಧ ಟಿ., ದಾವಣಗೆರೆ


## ಮರೆಯಾಗುವುದೇ ಸಡಗರ?

ಪ್ರವಾಸದ ಪರಿಕಲ್ಪನೆಯೊಂದಿಗೆ ಮದುವೆ ಸಂಭ್ರಮದಲ್ಲಿ ಆಯ್ದ ಕೆಲವು ಅತಿಥಿಗಳನ್ನು ಆಮಂತ್ರಿಸಿ, ಮದುವೆ ನಿರ್ವಹಣೆಯನ್ನು ‘ಇವೆಂಟ್ ಮ್ಯಾನೇಜ್ಮೆಂಟ್’ಗೆ ಒಪ್ಪಿಸಿ ಮದುವೆ ಮನೆಯಲ್ಲಿ ಅತಿಥಿಗಳಂತೆ ಆನಂದಿಸುತ್ತ ಪ್ರವಾಸಿ ತಾಣಗಳಲ್ಲಿ ಮದುವೆ ಆಚರಣೆ ಮಾಡುವುದು ಹೊಸ ಪರಿಕಲ್ಪನೆ. ಈಗಾಗಲೇ ಪ್ರತಿಯೊಂದೂ ಯಾಂತ್ರೀಕೃತಗೊಂಡಿದೆ. ಮದುವೆ ಮನೆ ಆಚರಣೆ, ನೆಂಟರಿಷ್ಟರ ಸಡಗರದ ಓಡಾಟ, ಊಟ, ತಿಂಡಿ ಉಪಚಾರ ಈ ಸಡಗರವೂ ನಿಧಾನಕ್ಕೆ ಮರೆಯಾಗುತ್ತಿರುವುದನ್ನು ಊಹಿಸಿಕೊಳ್ಳುವುದು ಕಷ್ಟ.

—ಭಾರತೀ ಗಂಗಾಧರ್, ಬೆಂಗಳೂರು

## ಆತಂಕಕಾರಿ ವಿಷಯ

‘ಅಂಕ ಆತಂಕ’ (ಮೇ 29, ಪಿ.ಬಿ. ಪ್ರಸನ್ನ) ಸಮಯೋಚಿತ ಹಾಗೂ ಪ್ರಸ್ತುತ ಸಮಾಜಕ್ಕೆ ಅವಶ್ಯಕ ಲೇಖನ. ಪೋಷಕರಿಗೆ ಮತ್ತು ಶಿಕ್ಷಕರಿಗೆ ಹಗುರವಾಗಿ ಕಂಡ ವಿಚಾರಗಳು ಮಕ್ಕಳಲ್ಲಿ ಹೇಗೆ ಒತ್ತಡ ಉಂಟು ಮಾಡಬಹುದು ಎಂಬುದನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ. ಶಾಲೆ, ಪೋಷಕರ ಕಾರಣವಲ್ಲದೆ ಸ್ವಯಂಪ್ರೇರಿತ ಒತ್ತಡಗಳನ್ನು ಮಕ್ಕಳು ಹಾಕಿಕೊಳ್ಳುತ್ತಾರೆ ಎಂಬುದು ಮತ್ತಷ್ಟು ಆತಂಕಕಾರಿ ವಿಷಯ.



—ಆಶಾ ಅಪ್ರಮೇಯ, ದಾವಣಗೆರೆ

## ಅಂಕದ ಯಂತ್ರಗಳೇ?

ಯಾವುದೇ ಪೋಷಕರನ್ನು ಕೇಳಿದರೂ ಮಕ್ಕಳನ್ನು ಡಾಕ್ಟರ್, ಎಂಜಿನಿಯರಿಂಗ್, ಎಂಬಿಎ ಮಾಡಿಸುತ್ತೇವೆಂದು ಹೇಳುತ್ತಾರೆಯೇ ಹೊರತು ಕಲೆ, ಸಾಂಸ್ಕೃತಿಕ, ಶೈಕ್ಷಣಿಕ, ಆಟೋಟ ಸ್ಪರ್ಧೆಗಳ ಕುರಿತು ಯೋಚಿಸುವುದೇ ಇಲ್ಲ. ಮಕ್ಕಳನ್ನು ಅಂಕದ ಯಂತ್ರಗಳಾಗಿಸಿ ಅವರಲ್ಲಿ ಮಾನವೀಯ ಮೌಲ್ಯಗಳ ಕುರಿತು ಹೇಳುವುದು ಮರಳುಗಾಡಿನಲ್ಲಿ ಓಯಸಿಸ್‌ನಂತೆ.

—ವಿಜಯ್ ಮಂಜುನಾಥ್

## ಪೂರ್ವಗ್ರಹ ಬದಲಾಗಿಲ್ಲ

‘ಅವರವರ ಅನುಭವ’ (ಮೇ 29, ವಸುಮತಿ ಉಡುಪ) ಕಥೆ ವಾಸ್ತವಕ್ಕೆ ಹಿಡಿದ ಕನ್ನಡಿ. ಜಗತ್ತು ಎಷ್ಟೇ ಬದಲಾದರೂ, ಎಷ್ಟೇ ಆಧುನಿಕವಾದರೂ, ಗಂಡುಮಕ್ಕಳೇ ಕೊನೆಗಾಲಕ್ಕೆ ಆಗುವವರು



ಎಂದು ಸಮರ್ಥಿಸಿಕೊಳ್ಳುವ, ಹೆಣ್ಣುಮಕ್ಕಳನ್ನು ಅಸಡ್ಡೆಯಿಂದ ಕಾಣುವ ಪೂರ್ವಗ್ರಹ ಪೀಡಿತ ಮನಸ್ಸುಗಳು ಈಗಲೂ ಇವೆ!

—ಶೋಭಾ ಸಂಪತ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in